ಸದಸ್ಯರು ಪುರಸಭೆ ಮುನಾಫಾ ಕ್ಷೇತ್ರಗಳು ಒಂದಕ್ಕಿಂತ ಹೆಚ್ಚು ಇದ್ದರೆ, ಬಹುಭಾಗ ನಿರತಕ್ಕ ಕ್ಷೇತ್ರದಲ್ಲಿರುವವರು ಸದಸ್ಯರಾಗಿರುತ್ತಾರೆ, ರಾಜ್ಯಸಭಾ ಸದಸ್ಯರಾಗಿರುವವರು ತಮ್ಮ ಖಾಯಂ ನಿವಾಸವನ್ನು ಯಾವ ಕ್ಷೇತ್ರದಲ್ಲಿ ಕೂಟ್ಟಿರುತ್ತಾರೆ, ಆ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಂಡಂತೆ ಅವರು ಸದಸ್ಯರಾಗಿರಬೇಕು ಎನ್ನುವಂಥ 3 ತಿದ್ದುಪಡಿಗಳನ್ನು ತಂದಿದ್ದಾರೆ. ಹಿಂದೆ ಈ ವಿಚಾರದಲ್ಲಿ ಈ ಬಗ್ಗೆ ಮಾನ್ಯ ಸದಸ್ಯರ ಸಮ್ಮತಿಯಿತ್ತ ಅಭಿಪ್ರಾಯ ಇದ್ದುದರಿಂದ ಒಂದು ಅಧ್ಯಾದೇಶವನ್ನು ತರ್ತಾಗಿ ಆ ಸಂದರ್ಭದಲ್ಲಿ ಹೊರಡಿಸಿದ್ದೆವು. ಇಪತ್ತು ಆ ತುರ್ತು ಅಧ್ಯಾದೇಶ ಬದಲಿಗೆ ಈ ಒಂದು ತಿದ್ದುಪಡಿಯನ್ನು ಇಲ್ಲಿ ತಂದಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ದಯಪಿಟ್ಟು ಕೊಡುವೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

+ಶ್ರೀ ವೈ. ರಾಮಕೃಷ್ಣ (ಅನೇಕಲ್) : ಸಭಾಸ್ಪೀಕರ್, ಇವರು ತಂದಿರತಕ್ಕ ತಿದ್ದುಪಡಿ ಮಸೂದೆ ಪೂರ್ಣವಾಗಿಲ್ಲ, ಅಪೂರ್ಣವಾಗಿದೆ. ಈ ಮಸೂದೆ ನಮ್ಮ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರುಗಳಿಗೆ ಅಧಿಕಾರ ಮಟಿಸಿಕೊಡತಕ್ಕದ್ದು. ಆದರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ತಾವು ಏಕೆ ಬಟ್ಟು ಬಿಟ್ಟರಿ ಎಂದು ಅರ್ಥವಾಗುತ್ತಿಲ್ಲ. ನಾನು ಅಕ್ಕ ನೋಡಿದೆ. ಕರ್ನಾಟಕ ರಾಜ್ಯದಲ್ಲಿ ನಿರತಕ್ಕದ್ದು ಕೇವಲ 20 ಜಿಲ್ಲಾ ಪಂಚಾಯಿತಿಗಳು, 175 ತಾಲ್ಲೂಕು ಪಂಚಾಯಿತಿಗಳು ಮತ್ತು 5670 ಗ್ರಾಮ ಪಂಚಾಯಿತಿಗಳು ನಮ್ಮ ರಾಜ್ಯದಲ್ಲಿವೆ. 5670 ಗ್ರಾಮ ಪಂಚಾಯಿತಿಗಳ ಅಧ್ಯಕ್ಷರುಗಳಿಗೆ ತಾವು ಅಧಿಕಾರ ಕೊಟ್ಟರೆ, ನಿಜವಾಗಿ ಗ್ರಾಮರಾಜ್ಯ ರಚನೆ ಆದಂತಾಗುತ್ತದೆ. ಅದನ್ನು ಬಿಟ್ಟು ನೀವು ಕೇವಲ 20 ಜಿಲ್ಲೆ ಅಂದರೆ ಬಹುತೇ ಆದು ಒಂದು ಸರ್ಕಾರ ಇದ್ದ ಹಾಗೆ. ಅಲ್ಲಿಯೂ ಐಎಎಸ್ ಅಧಿಕಾರಿಗಳು ದರ್ಬಾರು ಮಾಡುವುದು. ಆದು ಬಿಟ್ಟರೆ 175 ತಾಲ್ಲೂಕು ಜೋರ್ಡುಗಳು. ಅದಕ್ಕೆ ಅಧಿಕಾರ ದರ್ಬಾರು ಮಾಡುವುದು. ಆದು ಬಿಟ್ಟರೆ 175 ತಾಲ್ಲೂಕು ಜೋರ್ಡುಗಳು. ಅದಕ್ಕೆ ಅಧಿಕಾರ ನೀವು ಹೇಳಿದ್ದೆ ಅದರೂ ಅಡ್ಡಿಯಿಲ್ಲ. ಅಂದಮೇಲೆ ಮುಖ್ಯವಾದ ಅಂಶಕ್ಕೆ ಯಾವುದಕ್ಕೆ ತಿದ್ದುಪಡಿ ತರಬೇಕು ಅದಕ್ಕೆ ತಿದ್ದುಪಡಿ ತಂದಿಲ್ಲ; ಮತ್ತು ಅದಕ್ಕೆ ಕಾರಣ ಕೂಡ ಸೂಚಿಸಿಲ್ಲ. ಈ ಒಂದು 5670 ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿಸಲ್ಪಟ್ಟ ಅಧ್ಯಕ್ಷರುಗಳು ಯಾವ ಪಕ್ಷಬೇಧ ಇಲ್ಲದೆ ಚುನಾಯಿಸಲ್ಪಟ್ಟಿದ್ದಾರೆ. ಅದಕ್ಕೆ ಪಕ್ಷವೆ ಪತಿಯಿಂದ ಮಾಕಿಲ್ಲ. ಅವರು ತಮ್ಮ ಸ್ವಶಕ್ತಿಯಿಂದ ಗೆದ್ದು ಬಂದಿದ್ದಾರೆ. ಅದಕ್ಕೋಸ್ಕರ ನೀವು ಅಷ್ಟೊಂದು ಆಸಕ್ತಿ ತೋರಿಸಿಲ್ಲ. ಇದಕ್ಕೆ ಏತಕ್ಕೆ ನೀವು ಆಸಕ್ತಿ ತೋರಿಸಿದ್ದೀರಂದರೆ ಪಕ್ಷಗಳಿಂದ ಅಧ್ಯಕ್ಷರು ಆಯ್ಕೆಯಾಗಿದ್ದಾರೆ ಎಂದು. ಅವರಲ್ಲೂ ನಿಮ್ಮ ಪಕ್ಷದಿಂದ ಹಚ್ಚಿಗೆ ಆಯ್ಕೆಯಾಗಿದ್ದಾರೆ, ಅವ್ಯವಹಾರದಿಂದ ನೀವು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಅಧಿಕಾರ ಕೊಡುವುದಕ್ಕೆ ನೀವು ಬಹಳ ಮುಂದುವರಿದ್ದೀರಿ. ಮುಂದುವರಿಯಿರಿ ನಾನು ಅದಕ್ಕೆ ಬೇಡ ಅನ್ನುವುದಿಲ್ಲ. ಆದರೆ ಇದೇ ಉತ್ಸಾಹವನ್ನು ಅಲ್ಲಿ ಏತಕ್ಕೆ ತೋರಿಸಿಲ್ಲ? ಇವರು ಹೇಳುತ್ತಾರೆ, ಜಿಲ್ಲಾ ಪಂಚಾಯಿತಿಯಲ್ಲಿ ಅಲ್ಲಿ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಏನು ಅಧಿಕಾರ ಇತ್ತು...

ANNOUNCEMENT

MR. DEPUTY SPEAKER : I welcome the Indo-German Cultural

delegation which is witnessing the proceedings of the House from the speaker's gallery.

ಶ್ರೀ ವೈ. ರಾಮಕೃಷ್ಣ: ತಮ್ಮ ಉದ್ದೇಶ ರಾಜಕೀಯವಿಂದ ಕೂಡಿದ್ದು ಮಹಾತ್ಮಗಾಂಧಿಯವರು ಗ್ರಾಮ ಸ್ವರಾಜ್ಯ ರಚನೆ ಮಾಡಬೇಕೆಂದು ಹೇಳಿದ್ದರು. ಯಾವುದನ್ನು ಅಶೋಕ ಮೆಹ್ತಾರವರು ಹೇಳಿದ್ದು, ಯಾವುದನ್ನು ಜಯಪ್ರಕಾಶ್ ನಾರಾಯಣ್ ಹೇಳಿದ್ದರು ಅವುಗಳಲ್ಲೂಬನ್ನು ತಾವು ಮರೆತುಹೋಗಿಬಿಟ್ಟಿರಿ. ಅವರು ಏನು ಹೇಳುತ್ತಾರೆ, ಗ್ರಾಮಪಂಚಾಯಿತಿಗಳನ್ನು ಆರ್ಥಿಕವಸಮಾಡಬೇಕು, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಕೈಗೆ ಅಧಿಕಾರ ಕೊಡಬೇಕು ಅವರಿಗೆ ಹಣ ಕೊಡಬೇಕು. ಈ ಕೆಲಸವನ್ನು ತಾವು ಅಮೆಂಡಮೆಂಟ್ ನಲ್ಲಿ ಮಾಡಿದ್ದೀರಿ. ಇದಕ್ಕೆ ಸಣ್ಣ ಲೆಟರ್ ಏನಾದರೂ ಇದೆಯೇ? ನೀವು ಹೋಗುವುದಕ್ಕೆ ಮುಂಚೆ ನಾನು ಹೇಳುತ್ತಿದ್ದೇನೆ. ನೀವು ಕೊಟ್ಟಿರತಕ್ಕದ್ದು ಪಂಚಾಯಿತಿಗೆ. You have vested your powers to the Panchayat as a unit; not the Chairman of the Grama panchayat.

ಇದೇ ತತ್ವವನ್ನು ನೀವು ಜಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಅನುಸರಿಸಿಲ್ಲ. ಅದಕ್ಕೆ ನಾನು ಹೇಳಿದ್ದುದು, ಇದು ಅಪೂರ್ಣವಾಗಿದೆ, ಪೂರ್ಣವಾಗಿಲ್ಲ ಎಂದು. ಇದನ್ನು ನೀವು ಪಾಸ್ ಮಾಡಿ ಎಂದು ತಂದಿದ್ದೀರಿ. ಮತ್ತೊಂದು ವಿಚಾರ ಹೇಳುತ್ತೇನೆ, ಈ ಆಕ್ಟ್ ಏನಿದೆ ಇದರಲ್ಲಿ ತಾವು ಎಷ್ಟೆಷ್ಟು ಕರ್ತವ್ಯಗಳನ್ನು ನಿರ್ವಹಿಸಿದ್ದೀರಿ? ಇದರ ಪ್ರಕಾರ ಜಲ್ಲಾ ಪಂಚಾಯಿತಿಗಳಿಗೆ ತಾವು ಕೊಟ್ಟಿರತಕ್ಕ ಕೆಲಸಗಳು, 184ನೇ ಪ್ರಕರಣದಲ್ಲಿ 58 ಕೆಲಸಗಳನ್ನು ಇದಕ್ಕೆ ಒಪ್ಪಿಸಿದ್ದೀರಿ. ಷೆಡ್ಯೂಲ್-3ರ ತಿದ್ದುಪಡಿಗೆ 56 ಕೆಲಸಗಳನ್ನು ತಾವುಕೊಟ್ಟಿದ್ದೀರಿ. 145ನೇ ಪ್ರಕರಣ ಸಕೆಂಪ್ ಷೆಡ್ಯೂಲ್. ಅದೇ ರೀತಿ 69 ಕೆಲಸಗಳನ್ನು ತಾವು ಗ್ರಾಮ ಪಂಚಾಯಿತಿಗೆ ಕೊಟ್ಟಿದ್ದೀರಿ. ಒಂದನೇ ಷೆಡ್ಯೂಲ್ 58ನೇ ಪ್ರಕರಣ. ಅವರಿಗೆ ಕೆಲಸಗಳು ಜಾಸ್ತಿ ಮಹಿಸಿರತಕ್ಕ ಕೆಲಸದ ಮೊತ್ತ ಜಾಸ್ತಿ, ಸಂಬ್ಳ ಜಾಸ್ತಿ ಮತ್ತು ದೇಶದಲ್ಲಿರತಕ್ಕವರು ಅವರೆ. ಅವರಿಗೆ ಯಾವುದೂ ಅಧಿಕಾರ ಇಲ್ಲ. ಹಾಗಾದರೆ ಅವರ ಅಧಿಕಾರ ಏನು? ಇದರಲ್ಲಿ ತಾವು ನಮೂದಿಸಿದ್ದೀರಿ. ಹಣ ಏನು ಕೊಟ್ಟಿದ್ದೀರಿ? ಏನಾದರೂ ಒಂದು ದಿನಕ್ಕೆ ಆಗುವಷ್ಟು ಹಣ ಕೊಟ್ಟಿದ್ದೀರೋ? ಅದಕ್ಕೆ ನಾನು ಹೇಳುತ್ತಿದ್ದೇನೆ, ತಾವು ಸಮಗ್ರವಾದ ತಿದ್ದುಪಡಿ ತರಬೇಕು. ಮತ್ತೊಂದು ಅಂಶವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಪಂಚಾಯಿತಿ ಜಾರಿಗೆ ಬಂದು ಒಂದು ವರ್ಷವಾಯಿತು. ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದು ಕೆಲಸಗಳನ್ನು ನಿರ್ವಹಿಸುತ್ತಿವೆ. ಯಾವ ರೀತಿ ಇವು ಕೆಲಸ ನಿರ್ವಹಿಸುತ್ತಿವೆ ಎಂದು ಇಮ್ಪ್ಲಿಮೆಂಟೇಷನ್ ರಿಪೋರ್ಟ್ ತರಿಸಿದ್ದೀರೋ? ಯಾವುದಾದರೂ ಸರ್ವೆ ಮಾಡಿ ಹತ್ತು ಪಂಚಾಯಿತಿಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಕಾಲಕಾಲಕ್ಕೆ ಸೇರುತ್ತಿವೆಯೆ, ರೆಸಲ್ಯೂಷನ್ ಪಾಸ್ ಮಾಡುತ್ತಿವೆಯೇ, ಮಾಡಿದ್ದರ ಅವರು ತಮ್ಮಗುರಿಯನ್ನು ಮುಟ್ಟಿದ್ದಾರೆಯೆ, ಅವರಿಗೇನಾದರೂ ಫೈನಾನ್ಸ ತೊಂದರೆಗಳು ಇವೆಯೇ? ಅವರ ಜೊತೆಯಲ್ಲಿ ನೀವು ಕೊಟ್ಟಿರತಕ್ಕ ವಿಲೇಜ್ ಅಕೌಂಟೆಂಟ್ ಕೆಲಸ ನಿರ್ವಹಣೆಗೆ ಸಹಕಾರ ಕೊಡುತ್ತಿದ್ದಾರೆಯೆ ಆಥವಾ ತಾವು ಕಳುಹಿಸಿದಂತಹ ಹಣ ಲಪಟಾಯಿಸಿಕೊಂಡು ವಿಲೇಜ್ ಅಕೌಂಟೆಂಟ್ ಭೀರಪ್ಪನ ಹತ್ತಿರ ರುಜು ಹಾಕಿಕೊಂಡು ಓಡಿಹೋಗುತ್ತಿದ್ದಾನೆಯೆ? ರೋಜಗಾರ್